ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 189- 194
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆಂಧ್ರ ಮತ್ತು ಕರ್ನಾಟಕ ಗಡಿಭಾಗದ ಜೀವನಾವರ್ತನ ಆಚರಣೆಗಳು: ಜಾನಪದೀಯ ವಿಶ್ಲೇಷಣೆ

**ಐ ವೀರೇಶ್***

*ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

***Abstract:***

*ಮಾನವನು ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಆಚರಣೆಗಳನ್ನು ಜೀವನಾವರ್ತನ ಆಚರಣೆ ಎಂದು ಕರೆಯಲಾಗುತ್ತದೆ. ಇದು ಕ್ರಮವತ್ತಾದ ವಿಧಿಪೂರ್ವಕವಾದ, ಪರಂಪರಾನುಗತವಾಗಿ ನಡೆದು ಬಂದ ರೀತಿಯಲ್ಲಿ ನಡೆಸುವ ಕ್ರಿಯೆಗಳ ಹಿನ್ನೆಲೆಯಲ್ಲಿ ನಂಬಿಕೆ ಮತ್ತು ಆಚರಣೆಗಳು ಆಳವಾಗಿ ಬೇರು ಬಿಟ್ಟಿರುತ್ತದೆ. ನಂಬಿಕೆ ಮತ್ತು ಆಚರಣೆ ಪರಸ್ಪರ ಪೂರಕವಾಗಿರುತ್ತದೆ. ಪ್ರಸ್ತುತ ಲೇಖನದಲ್ಲಿ ಆಂಧ್ರ ಮತ್ತು ಕರ್ನಾಟಕ ಗಡಿಭಾಗದಲ್ಲಿ ನೆಲೆಸಿರುವ ಸಮುದಾಯಗಳ ಜೀವನಾವರ್ತನ ಆಚರಣೆಗಳಲ್ಲಿ ಜನನ, ನಾಮಕರಣ, ಜೋಗುಳ ಸಂಪ್ರದಾಯ, ಪ್ರೌಢಾವಸ್ಥೆ ಆಚರಣೆಗಳನ್ನು ಜಾನಪದೀಯ ದೃಷ್ಟಿಕೋನದಲ್ಲಿ ವಿವರಿಸಲಾಗಿದೆ.*

**Keywords:** *ಜೀವನಾವರ್ತನ, ಆಚರಣೆ, ಗಡಿರಾಜ್ಯ, ಸಮಾಜ, ಸಂಸ್ಕೃತಿ.*

## ಪೀಠಿಕೆ

ಬಳ್ಳಾರಿ ಸೀಮೆ ವಿಶೇಷವಾಗಿ ಹಳೆಯ ಬಳ್ಳಾರಿ ಜಿಲ್ಲೆಯ ಪೂರ್ವ ಭಾಗವು ಕರ್ನಾಟಕ ಮತ್ತು ಆಂಧ್ರಪ್ರದೇಶದ ಸಭೆಯ ಸ್ಥಳವಾಗಿತ್ತು. ಇಲ್ಲಿ ಎರಡು ಪ್ರಾಚೀನ ದ್ರಾವಿಡ ಸಂಸ್ಕೃತಿಗಳ ಮಿಶ್ರಣವಿತ್ತು. ಕರ್ನೂಲಿನ ಆದೋನಿ ಸೀಮೆಯು ರಾಯಲಸೀಮಾ ಎಂಬ ಪ್ರದೇಶದಲ್ಲಿ ಅದರ ಭೌಗೋಳಿಕ ಪರಿಸ್ಥಿತಿ ಮತ್ತು ಐತಿಹಾಸಿಕ ಸನ್ನಿವೇಶಗಳಿಂದ ಕನ್ನಡಿಗರ ಮತ್ತು ಆಂಧ್ರದ ಸಂಸ್ಕೃತಿಗಳು ಒಟ್ಟಿಗೆ ಬೆಸೆದುಕೊಂಡಿವೆ. ಬಳ್ಳಾರಿಗೆ ಭೇಟಿ ನೀಡಿದ ಹೊರಗಿನವರು ಜನರ ಆತಿಥ್ಯಕ್ಕೆ ಮನಸೋತಿದ್ದಾರೆ. ಅವರು ತಮ್ಮ ಅಭಿರುಚಿಯಲ್ಲಿ ಶಾಂತ ಮತ್ತು ಪರಿಷ್ಕೃತರಾಗಿದ್ದಾರೆ. ಸಂಪ್ರದಾಯದ ಪ್ರಕಾರ ಅವರು ದೇಶಭಕ್ತರು ಮತ್ತು ಸ್ವಯಂ ತ್ಯಾಗ ಮಧ್ಯಕಾಲೀನ ಯುಗದಲ್ಲಿ ಬಳ್ಳಾರಿ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಜನರು ಆಕ್ರಮಣಕಾರಿ ಗುಂಪುಗಳ ದಾಳಿಯನ್ನು ಎದುರಿಸಿದರು. ಅವರು ಕಲೆ ಮತ್ತು ಸಾಹಿತ್ಯದ ಶ್ರೀಮಂತ ಸಂಪ್ರದಾಯವನ್ನು ಹೊಂದಿದ್ದಾರೆ.

ಇಂತಹ ಸೀಮೆಯಲ್ಲಿ ಜನರ ಜೀವನಾವರ್ತನ ಆಚರಣೆಗಳು ಎರಡು ಸಂಸ್ಕೃತಿಗಳ ಸಮ್ಮಿಲನವೇ ಸರಿ. ಎಲ್ಲಾ ಸೀಮೆಗಳಲ್ಲಿ ಇರುವಂತೆ ಇಲ್ಲಿಯೂ ಕೂಡ ಜೀವನಕ್ಕೆ ಸಂಬಂಧಿಸಿದ ಕೆಲವು ಆಚರಣೆಗಳು ತಲೆಮಾರಿನಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಅವು ಜನರ ಜೀವನಕ್ಕೆ ತುಂಬಾ ಹತ್ತಿರದಲ್ಲಿರುತ್ತವೆ.

***Please cite this article as:*** ವೀರೇಶ್ ಐ. (2022). ಆಂಧ್ರ ಮತ್ತು ಕರ್ನಾಟಕ ಗಡಿಭಾಗದ ಜೀವನಾವರ್ತನ ಆಚರಣೆಗಳು: ಜಾನಪದೀಯ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 189–194.

ಪ್ರತಿ ಜನ ಸಮುದಾಯದಲ್ಲಿ ಜನನ, ನಾಮಕರಣ, ತೊಟ್ಟಿಲು, ಋತುಮತಿ ಸಂಪ್ರದಾಯ, ಇಳೆವು, ವಿವಾಹ, ಸೋಬನ, ಗರ್ಭಿಣಿ, ಸೀಮಂತ, ನಾರಿದಟ್ಟಿ, ಷಷ್ಠಬ್ಧಿ, ಮರಣ, ವೈಕುಂಠ ಸಮಾರಾಧನೆ, ತಿಥಿ ಇತ್ಯಾದಿಗಳು ಮೇಳೈಸಿಕೊಂಡಿವೆ. ಅವುಗಳು ಜನರ ದಿನನಿತ್ಯಕ್ಕೆ ಹತ್ತಿರವಾಗಿದ್ದರೂ ಅವುಗಳನ್ನು ಸಾಮಾನ್ಯ ನೋಡುವು ದೃಷ್ಟಿಕೋನಕ್ಕಿಂತ ಅಧ್ಯಯನ ಮಾಡುವ ಸಂಶೋಧಕ ನೋಡುವ ದೃಷ್ಟಿ ಬೇರೆಯದ್ದೆ ಆಗಿರುತ್ತದೆ.

**ನಾಮಕರಣ**

ಪ್ರತಿಯೊಂದು ಸೀಮೆಗಳಲ್ಲಿ ನೆಲೆಸಿರುವ ವಿವಿಧ ಜಾತಿ ಜನಾಂಗ ಧರ್ಮದ ಜನರಲ್ಲಿ ಪ್ರತಿಯೊಂದು ಹುಟ್ಟಿದ ಮಗುವಿಗೆ ಕೆಲವು ದಿನಗಳ ನಂತರ ಹೆಸರನ್ನು ಇಡುವುದು ಸಾಂಪ್ರದಾಯಿಕವಾದ ಆಚರಣೆಯಾಗಿದೆ. ಇಟ್ಟ ಹೆಸರಿನಿಂದಲೇ ಮಗುವನ್ನು ಗುರುತಿಸುವುದು ಲೋಕರೂಡಿ. ಕನ್ನಡ ಮತ್ತು ತೆಲುಗು ಸಿನಿಮಾ ಜನರ ಧಾರ್ಮಿಕ ವಿಧಿ ವಿಧಾನಗಳು ವಿಭಿನ್ನವಾಗಿದ್ದರು ನಾಮಕರಣ ಆಚರಣೆಯು ಸರ್ವೆಸಾಮಾನ್ಯವಾಗಿ ಒಂದೇ ಆಗಿರುತ್ತದೆ. ಪ್ರತಿಯೊಂದು ಮನೆಯಲ್ಲಿ ಹುಟ್ಟಿದ ಮಗುವಿಗೆ ಈ ಭಾಗದಲ್ಲಿ ಹಿಂದೂ ಧರ್ಮದ ಪ್ರಕಾರ 18 ದಿನಗಳಲ್ಲಿ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಾರೆ. ಹುಟ್ಟಿದ ದಿನದಿಂದ ಮನೆಗೆ ಸೂತಕವಾಗಿರುವುದರಿಂದ ಇತರೆ ಮನೆಯವರು ಹಡೆದ ಮನೆ ಕಡೆಗೆ ಸುಳಿಯುವುದಿಲ್ಲ. ಹಾಗಾಗಿ ಹಡೆದ ಮನೆಯ ಮಹಿಳೆಯರು ಮೊಟ್ಟ ಮೊದಲನೆದಾಗಿ ಮನೆಯನ್ನು ಸಂಪೂರ್ಣವಾಗಿ ನೀರಿನಿಂದ ಸ್ವಚ್ಛವಾಗಿ ತೊಳೆದು ಕಡಿಯನ್ನು ತೊಳೆದು ಧೂಳನ್ನು ಜಾಡಿಸುತ್ತಾರೆ. ತದನಂತರ ಮನೆಗೆ ಸುಣ್ಣ ಬಣ್ಣದಿಂದ ಸುಂದರವಾದ ಅಲಂಕಾರ ಮಾಡುತ್ತಾರೆ.

ಮನೆಯ ಹಿರಿಯ ಯಜಮಾನನು ತನ್ನ ಮನೆಯೊಡತಿಯನ್ನು ಕರೆದುಕೊಂಡು ಮಗಳ ಇಲ್ಲವೇ ಸೊಸೆಯ ಹೆರಿಗೆಯಾದ ಸಮಯವನ್ನು ನೆನಪಿಟ್ಟುಕೊಂಡು ಜ್ಯೋತಿಷ್ಯರ ಬಳಿಗೆ ಹೋಗಿ ನಾಮಕರಣದ ದಿನಾಂಕವನ್ನು ನಿರ್ಧರಿಸಿಕೊಂಡು ಬರಲು ತೆರಳುತ್ತಾರೆ. ಶಾಸ್ತ್ರವನ್ನು ಬಲ್ಲ ಜೋಯಿಸರು ಮಗು ಹುಟ್ಟಿದ ಸಮಯ ನಕ್ಷತ್ರ ಕುಲ ಗೋತ್ರಗಳನ್ನು ಕೇಳಿ ಜೋಯಿಸರು ಹೇಳುವ ಹೆಸರುಗಳನ್ನು ಇಲ್ಲವೇ ಮನೆ ದೈವದ ಹೆಸರನ್ನು ಅಥವಾ ಆಧುನಿಕವಾಗಿ ತಾವು ಇಡಬೇಕು ಎಂದುಕೊಂಡಿರುವ ಹೆಸರುಗಳನ್ನು ಮುಖ್ಯವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ತದನಂತರ ನಾಮಕರಣ ಕಾರ್ಯಕ್ರಮವನ್ನು ಮಗು ಹುಟ್ಟಿದ 18 ದಿನಕ್ಕೆ ಇಟ್ಟುಕೊಳ್ಳುತ್ತಾರೆ.

ಕಾರ್ಯಕ್ರಮಕ್ಕೆ ಒಂದು ದಿನ ಮುಂಚಿತವಾಗಿ ದೂರದ ಊರಿನ ಸಂಬಂಧಿಕರನ್ನು ಮನೆಯ ಅಕ್ಕಪಕ್ಕದವರನ್ನು ಕರೆಯುತ್ತಾರೆ. ಈ ಕಾರ್ಯಕ್ರಮಕ್ಕೆ ಹುಟ್ಟಿದ ಮಗುವಿನ ಸೋದರಮಾವ ಸೋದರತ್ತೆ ಕಡ್ಡಾಯವಾಗಿ ಬರಲೇಬೇಕಾಗುತ್ತದೆ. ಕಾರ್ಯಕ್ರಮದ ಸಾಯಂಕಾಲ ಮನೆಗೆ ಬಂದಿರುವ ಸೋದರತ್ತೆಯು ಸಾಯಂಕಾಲ ದೀಪದ ಬೆಳಕಿನಲ್ಲಿ ಮಗುವಿನ ಕಿವಿಯಲ್ಲಿ ಜ್ಯೋತಿಷ್ಯರು ಹೇಳಿದ ಹೆಸರನ್ನು ಮೂರು ಬಾರಿ ಪಿಸುಗುಡುತ್ತಾಳೆ. ಕಾರ್ಯಕ್ರಮದಲ್ಲಿ ನೆರೆದಿರುವ ಮುತ್ತೈದೆಯರು ಮಗುವನ್ನು ಎತ್ತಿಕೊಂಡು ತೊಟ್ಟಿಲಿಗೆ ಹಾಕಿ ಲಾಲಿ ಹಾಡುಗಳನ್ನು ಹಾಡುತ್ತಾರೆ.

ಕಾರ್ಯಕ್ರಮಕ್ಕೆ ನೆರೆದಿರುವ ಮಹಿಳೆಯರು ಗಂಡಸರು ಸಂತೋಷಕೂಟದಲ್ಲಿ ಭಾಗಿಯಾಗುತ್ತಾರೆ. ಹೆಂಗಸರು ತೊಟ್ಟಿಲ ಬಳಿ ಇದ್ದರೆ ಗಂಡಸರು ಹೊರಗೆ ಕಟ್ಟೆಯ ಮೇಲೆ ಹರಟೆ ಹೊಡೆಯುತ್ತಾ ಕುಳಿತಿರುತ್ತಾರೆ. ಬಂದಿರುವ ಸಂಬಂಧಿಕರು ಮನೆಯಿಂದ ಯಾವುದಾದರೂ ಉಡುಗೊರೆಯನ್ನು ತೆಗೆದುಕೊಂಡು ಬಂದಿರುತ್ತಾರೆ. ಉದಾಹರಣೆಗೆ ಉಂಗುರ, ಬೆಳ್ಳಿ ಚೈನು ಕೊರಳಿಗೆ ಹಾಕುವ

ಸಂಪ್ರದಾಯವಿದೆ. ಹೊಸ ಬಟ್ಟೆ ಇವುಗಳನ್ನೆಲ್ಲ ತಂದು ಮಗುವಿಗೆ ಉಡಿಸುತ್ತಾರೆ. ಇನ್ನೂ ಕೆಲವರು ಹಣದ ರೂಪದ ಕಾಣಿಕೆಯನ್ನು ನೀಡುವುದುಂಟು.

**ಜೋಗುಳ ಸಂಪ್ರದಾಯ**

ಬಳ್ಳಾರಿ ಸೀಮೆ ಮತ್ತು ಆದೋನಿ ತಾಲೂಕಿನ ಪ್ರದೇಶಗಳಲ್ಲಿ ತಾಯಂದಿರು ಮಕ್ಕಳನ್ನು ತೊಡೆಯ ಮೇಲೆ ಅಥವಾ ತೊಟ್ಟಿಲಲ್ಲಿ ಮಲಗಿಸಿ ತಮ್ಮ ಸುಶ್ರಾವ್ಯ ಕಂಠದಿಂದ ಹಾಡುವ ಹಾಡುಗಳಿಗೆ ಜೋಗುಳ ಹಾಡುಗಳು ಇಲ್ಲವೇ ತೊಟ್ಟಿಲು ಹಾಡು ಎಂದು ಕರೆಯುತ್ತಾರೆ. ಕರುಣಾಮಯಿಯಾದ ತಾಯಿಯು ವಾತ್ಸಲ್ಯಭರಿತವಾಗಿ ಮಗುವಿನ ಕಣ್ಣ ಮುಂದೆ ಚಿತ್ರರೂಪಗಳು ಬರುವಂತೆ ಹಾಡುಗಳನ್ನು ಹಾಡುತ್ತಾಳೆ. ಈ ಹಾಡಿನ ಕಂಠದಿಂದ ಮಗು ತನಗೆ ತಾನೇ ಮಲಗುತ್ತದೆ.

ರಾಮಾಯಣ ಮಹಾಭಾರತದ ಕಾಲದಲ್ಲಿಯೂ ಕೂಡ ತಾಯಿ ಮಗುವನ್ನು ಮರದ ಕೊಂಬೆಗೆ ಒಂದು ಸೀರೆಯನ್ನು ಕಟ್ಟಿ ತೊಟ್ಟಿಲನ್ನಾಗಿಸಿ ಅದನ್ನು ತೂಗುತ್ತಾ ವಿವಿಧ ರೀತಿಯ ಹಾಡುಗಳನ್ನು ಹಾಡುವ ಮೂಲಕ ಧಾರ್ಮಿಕ ಜೋಗುಳ ಸಂಪ್ರದಾಯವು ಬೆಳೆದು ಬಂದಿದೆ. ಸಾಮಾನ್ಯವಾಗಿ ಕನ್ನಡ ಮತ್ತು ತೆಲುಗು ಪರಿಸರದಲ್ಲಿ ಹಾಡುವ ಈ ಜೋಗುಳ ಹಾಡುಗಳು ತ್ರಿಪದಿಯಲ್ಲಿ ಇರುತ್ತವೆ. ಕ್ಷೇತ್ರ ಅಧ್ಯಯನದ ಸಂದರ್ಭದಲ್ಲಿ ಹೋದಾಗ ಅಲ್ಲಿರುವ ಕೆಲವು ಹಿರಿಯ ತಲೆಮಾರಿನ ಹೆಂಗಸರು ತ್ರಿಪದಿಗಳನ್ನು ಹಾಡುತ್ತಾ ಒಂದನೇ ಸಾಲನ್ನು ಒಂದು ಬಾರಿ ಎರಡನೇ ಸಾಲನ್ನು ಎರಡು ಬಾರಿ ಹಾಡುತ್ತ ಮೂರನೇ ಸಾಲು ಒಂದೇ ಬಾರಿಗೆ ಹಾಡಿ ಈ ತ್ರಿಪದಿಗಳನ್ನು ಮುಗಿಸುತ್ತಿದ್ದರು. ಅವರು ಹಾಡುವ ಅಂಶ ಲಯ ದಾಟಿಗೆ ಎಂತಹ ಮಗುವಿಗೂ ನಿದ್ದೆ ಬರದಿರಲಾರದು. ಅಂತಹ ಕೆಲವೊಂದು ಜನಪದ ಜೋಗುಳ ತ್ರಿಪದಿಗಳನ್ನು ಈ ಕೆಳಗಿನಂತೆ ಕಾಣಬಹುದು.

***'ಅತ್ತು ಕಾಡುವವನಲ್ಲ ಮತ್ತೆ ಬೇಡುವವನಲ್ಲ,***

***ಮೆತ್ತನೆ ಎರಡು ಅತಿರಸ ಕೊಟ್ಟರೆ***

***ಗಪ್ಪುಚಿಪ್ಪಾಗಿ ಮಲಗ್ಯಾನು***

ಕನ್ನಡದ ಜೋಗುಳ ಸಂಪ್ರದಾಯ ಇಂದು ನಿನ್ನೆಯದಲ್ಲ. ತಲಾತಲಾಂತರದಿಂದ ಬಂದ ಇದೊಂದು ಜನಪದ ಸಂಪ್ರದಾಯ. ಒಬ್ಬ ತಾಯಿಯು ತನ್ನ ಮಗುವನ್ನು ಮಲಗಿಸುವಾಗ ಜೋಗುಳ ಹಾಡುವುದು ಸರ್ವೇ ಸಾಮಾನ್ಯವಾದ ವಿಷಯವಾಗಿದ್ದರೂ ಕೂಡ ಅದನ್ನು ಸುಸ್ರಾವ್ಯವಾಗಿ ಹಾಡುವುದು ಕಷ್ಟಕರವಾದ ಕೆಲಸ. ಮೇಲಿನ ಜನಪದ ಜೋಗುಳ ಹಾಡುಗಳಲ್ಲಿ ಮಗುವನ್ನು ಮಲಗಿಸುವಾಗ ತನ್ನ ಮಗನ ಮುಗ್ಧ ಸ್ವಭಾವವನ್ನು ತಾಯಿಯಾದವಳು ಕಾಡುವುದು ಇಲ್ಲ ಮತ್ತೆ ಮತ್ತೆ ಇಂತಹ ವಿಷಯಗಳು ವಸ್ತುಗಳು ಬೇಕು ಎಂದು ಕೇಳುವುದಿಲ್ಲ ಬೆತ್ತನಾಗಿರುವ ಎರಡು ಗಲ್ಲದ ಮೇಲೆ ಮುತ್ತುಗಳನ್ನು ಕೊಟ್ಟರೆ ಕಪ್ಪು ಚಿಪ್ಪಾಗಿ ಸದ್ದು ಮಾಡದೆ ಮಲಗುತ್ತಾನೆ ಎಂಬುದು ಇದರ ಅಂತರಾಳದ ಭಾವ. ಎಂತಹ ಗಾಳಿ ಸುಲಿದರು ತೋಟದ ಗಾಳಿಯಂತೆ ಕುಳರು ಗಾಳಿ ಸುಳಿಯದು ಸುತ್ತಲೂ ಗಾಳಿಗಳು ಸುಳಿಯುತ್ತಲೇ ಇದ್ದರೂ ತೊಟ್ಟಿಲ ಗಾಳಿಯು ಮಗುವನ್ನು ಮಲಗುಸುವಲ್ಲಿ ಒಂದು ಸುಂದರಪ್ರಜ್ಞೆಯನ್ನು ಹುಟ್ಟಿಸುತ್ತದೆ ಎಂಬ ಭಾವವು ತಾಯಿಯ ಕಂಠದಿಂದ ಹೊರಡುತ್ತಲೇ ಮಗು ಮಲಗಿಬಿಡುತ್ತದೆ ಇಂತಹ ಜೋಗುಳ ಹಾಡುಗಳನ್ನು ನಾವು ಸಿರುಗುಪ್ಪ ಸೀಮೆಯ ಗ್ರಾಮಗಳಲ್ಲಿ ಕಾಣಬಹುದು.

ಇನ್ನು ತೆಲುಗು ಸೀಮೆಯಾದ ಆದೋನಿ ಪ್ರಾಂತ್ಯದಲ್ಲಿ ಇರುವ ಜೋಗುಳ ಹಾಡುಗಳನ್ನು ತೆಲುಗು ಭಾಷೆಯಲ್ಲಿ ಕೇಳುವುದೇ ಒಂದು ಸೊಗಸು.

***'ನಂದು ನಿಂತನು ಜೇರಿ ನಯಮು***

***ಮೀರಂಗ ಚಂದ್ರ ವದನಗಳು***

***ನೀನು ಸೇವೆಯಂಗ ಅಂದಮುಗ***

ಇಲ್ಲಿನ ಜನಪದರು ನಿಂತುಕೊಂಡು ಕುಂತುಕೊಂಡು ಮರದ ಅಡಿಯಲ್ಲಿ ಜೋಡಿಗೆ ಕಟ್ಟಿರುವ ಮಗುವಿಗೆ ಮಲಗುಸುವಾಗ ಹಾಡುವ ಜೋಗುಳದ ಹಾಡುಗಳು ಅತಿ ಮಧುರ ಮತ್ತು ಸುಮಧುರ ಕಂಡ ಬರಿತವಾದ ಸಂಗೀತವರಂತೆ ಭಾವಿಸಲಾಗುತ್ತದೆ.

***'ಜೋ...ಜೋ...ಜೋ...ಜೋ...ಜೂ***

***ಜೋ...ಜೋ...ಜೋ...ಜೋ...ಜೂ***

***ಅಲಮ್ ಏಳುಪತಿಕಿ ಅನ್ನಮಯ್ಯ ಲಾಲಿ***

***ಅಲಮ್ ಏಳುಪತಿಕಿ ಅನ್ನಮಯ್ಯ ಲಾಲಿ***

***ಕೊಡನ್ದಾ ರಾಮುನಿಕಿ ಗೋಪಯ್ಯ ಲಾಲಿ***

***ಕೋಡನ್ದಾ ರಾಮುನಿಕಿ ಗೋಪಯ್ಯ ಲಾಲಿ***

ಅಚ್ಚ ಕನ್ನಡದ ದೇಶಿಯ ನೆಲವಾದ ಆಧುನಿಕ ಸೀಮೆಯಲ್ಲಿ ಕನ್ನಡದ ಹಲವಾರು ಜನವಸತಿ ಸಮುದಾಯಗಳು ಶತಮಾನಗಳಿಂದಲೂ ವಾಸಿಸುತ್ತಿದ್ದಾರೆ ಆದರೆ ಅವರು ತಮ್ಮ ಮಾತೃಭಾಷೆಯನ್ನು ತೆಲುಗುವಾಗಿ ಸ್ವೀಕರಿಸಿರುವುದರಿಂದ ಅವರ ಜನಪದ ಜೋಗುಳ ಹಾಡುಗಳಾಗಿಯೂ ಕೂಡ ದೇಸಿ ಶೈಲಿಯ ತೆಲುಗು ಭಾಷೆ ಅನುರಾಣಿಸುತ್ತದೆ. ಆಡುವ ಹಾಡುಗಳಲ್ಲಿ ಇವರು ಅನ್ನಮಯ್ಯನನ್ನು ಗೋಪಯ್ಯನನ್ನು ಸವಿಮಯ್ಯನನ್ನು ಎಂಬ ಸಾಧು ಸತ್ಪುರುಷರ ಗುಣಗಳನ್ನು ತನ್ನ ಮಕ್ಕಳಿಗೆ ಒಲಿಯಲಿ ಎಂಬ ಭಾವ ದೊಂದಿಗೆ ಕೆಲವೊಂದು ಜೋಗುಳ ಹಾಡುಗಳನ್ನು ಕಟ್ಟಿಕೊಂಡಿದ್ದಾರೆ. ಆಧುನಿಕ ದಿನಮಾನದ ಭರಾಟೆಯಲ್ಲಿ ಮುಳುಗು ಹೋಗಿರುವ ತಮ್ಮತನದ ಸ್ಥಿತಿಯಲ್ಲಿಯೂ ಕೂಡ ಆಧುನಿ ಪ್ರಾಂತ್ಯದ ಕೆಲವು ಜನಪದ ಹಳ್ಳಿಗಳಲ್ಲಿ ಈ ರೀತಿಯ ಜೋಗುಳ ಸಂಪ್ರದಾಯವನ್ನು ಜನ ಮರೆತಿಲ್ಲ ಎಂಬುದು ಸೋಜಿಗದ ಸಂಗತಿ.

**ಋತುಮತಿ ಸಂಪ್ರದಾಯ**

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಸೀಮೆಯಲ್ಲಿ ಋತುಮತಿ ಸಂಪ್ರದಾಯವು ತುಂಬಾ ವಿಶೇಷವಾಗಿ ಆಚರಿಸುವ ಜೀವನ ಆವರ್ತಕ ಆಚರಣೆಗಳಲ್ಲಿ ಒಂದಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಜಾತಿ ಜನಾಂಗ ಧರ್ಮಗಳಲ್ಲಿ ಋತುಮತಿಯಾಗುವ ಕಾರ್ಯಕ್ರಮವನ್ನು ವಿಶೇಷವೆಂದು ಭಾವಿಸುತ್ತಾರೆ. ಹೆಣ್ಣು ಮಗಳಾದವಳು ಸಾಮಾನ್ಯವಾಗಿ ಸುಮಾರು 14 ರಿಂದ 16ನೇ ವಯಸ್ಸಿನ ನಡುವೆ ಋತುಮತಿಯಾಗುವುದು ಪ್ರಾಕೃತಿಕ. ಋತುಮತಿಯಾಗದಿದ್ದರೆ ದೇವರಲ್ಲಿ ಹರಕೆ ಹೊರುತ್ತಾರೆ. ಋತುಚಕ್ರ ಪ್ರಾರಂಭವಾಗದ ಸಮಯ ಕಳೆದು ಹೋಗಿರುವ ಹೆಣ್ಣುಮಗಳನ್ನು ಫಲ ಕೊಡುವ ಆಚರಣೆಯನ್ನು ಕೂಡ ಈ ಸೀಮೆಯಲ್ಲಿ ಆಚರಿಸುವುದನ್ನು ಕಾಣಬಹುದು. ಈ ಆಚರಣೆಯಲ್ಲಿ ತೆಂಗು ಬಾಳೆ ನಿಂಬೆ ಹಲಸು ಗಿಡದ ಕೆಳಗೆ ಕೂರಿಸುತ್ತಾರೆ. ಸುಮಾರು 3–4 ದಿನ ಕಳೆದ ಮೇಲೆ ಈ ಗಿಡವು

ಒಣಗಿ ಬಾಡಿ ಹೋದರೆ ಹೆಣ್ಣು ಮಗುವಿಗೆ ಜಾತಕದಲ್ಲೇನೋ ದೋಷವಿದೆ ಎಂದು ಭಾವಿಸಲಾಗುತ್ತದೆ. ಗಿಡವು ಒಣಗದೆ ಹಾಗೆ ಇದ್ದರೆ ಅವಳ ಮುಟ್ಟು ಇಲ್ಲವೇ ಋತುಮತಿ ದೋಷರಹಿತವಾದದ್ದು ಎಂಬ ನಂಬಿಕೆ ಈಗಲೂ ಇದೆ.

ಹೆಣ್ಣು ಮಕ್ಕಳು ಋತುಮತಿಯಾದಾಗ ಸೂತಕ ಎಂದು ಭಾವಿಸುತ್ತಾರೆ ಸುಮಾರು ಏಳು ದಿನಗಳವರೆಗೆ ಅವಳು ಉಪಯೋಗಿಸುವ ಹಾಸಿಗೆ ಊಟದ ತಟ್ಟೆ ತಲೆದಿಂಬು ಇತರೆ ಸಾಮಾನುಗಳನ್ನು ಮನೆಯಲ್ಲಿ ಇರುವ ಇತರರು ಯಾರು ಉಪಯೋಗಿಸುವುದಿಲ್ಲ. ಅವಳನ್ನು ಮನೆಯಲ್ಲಿರುವ ಒಂದು ಕೊಠಡಿಯಲ್ಲಿ ಪ್ರತ್ಯೇಕವಾಗಿರಿಸಿ ವಿಶೇಷವಾದ ಆಹಾರ ತಿನಿಸುಗಳನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ಮನೆಯಲ್ಲಿ ಎಲ್ಲರೂ ಸೂತಕ ಅಥವಾ ಮೈಲಿಗೆ ಎಂದು ಭಾವಿಸುತ್ತಾರೆ ಇತ್ತೀಚಿನ ದಿನಗಳಲ್ಲಿ ಈ ಆಚರಣೆಗಳು ಕಡಿಮೆಯಾಗುತ್ತಿವೆ.

**ಮೈ ನೆರೆದವರಿಗೆ ನೀರೆಯುವುದು**

ಮೈನೆರೆದ ಹೆಂಗಳೆಗೆ ಮೊಟ್ಟ ಮೊದಲನೆಯದಾಗಿ ಆರಂಭಿಸುವ ಕಾರ್ಯ ಅರಿಶಿನ ನೀರಿನಿಂದ ಸ್ನಾನವನ್ನು ಮಾಡಿಸುವುದು. ಓಣಿಯಲ್ಲಿರುವ ಐದು ಮಂದಿ ಮುತ್ತೈದರನ್ನು ಕರೆಸಿ ದೂರದಲ್ಲಿರುವ ಸೋದರತ್ತೆಯನ್ನು ಕರೆಸಿ, ಮೊದಲು ಬಂದು ಅವಳ ತಲೆಗೆ ನೀರನ್ನು ತೆರೆಯುತ್ತಾರೆ. ಬಿಸಿ ನೀರನ್ನು ತೆಲೆಗೆರೆಯುವ ಮುನ್ನ ಅವಳ ತಲೆಗೆ ಹಾಲು ತುಪ್ಪ ಹಾಕಿ ಮಧ್ಯಾಹ್ನ ಮಾಡಿಸುತ್ತಾರೆ. ಪ್ರತಿದಿನ ಸಂಜೆಯ ಸಮಯದಲ್ಲಿ ಮೈ ನೆರೆದ ಹೆಣ್ಣು ಮಗಳಿಗೆ ಬಿಸಿ ಬಿಸಿಯಾದ ನೀರಿನಿಂದ ಅರಿಶಿಣವನ್ನು ಮಿಶ್ರಣ ಮಾಡಿ ತಲೆಯಿಂದ ಅಡಿಯಿಂದ ಮುಡಿಯವರಿಗೆ ಸ್ನಾನವನ್ನು ಮಾಡಿಸುತ್ತಾರೆ ಹೀಗೆ ಸ್ನಾನವನ್ನು ಮಾಡಿಸುವುದರಿಂದ ಅವಳು ಮೈಲಿಗೆಯಿಂದ ಮುಕ್ತಾಳಗುತ್ತಾಳೆ ಎಂಬುದು ಇಲ್ಲಿನ ಜನರ ನಂಬಿಕೆ.

ಪ್ರತಿದಿನ ಸಂಜೆಯ ಸಮಯದಲ್ಲಿ ಋತುಮತಿಯಾದ ಹೆಣ್ಣುಮಗಳಿಗೆ ಸ್ನಾನ ಮಾಡಿಸಿದ ನಂತರ ಮನೆಯ ಮುಂದೆ ಸುಂದರವಾದ ತೆಂಗಿನ ಚಪ್ಪರವನ್ನು ಹಾಕಿ ಅದಕ್ಕೆ ಅಲಂಕಾರಗೊಳಿಸಿ ಮುಖ್ಯ ಮಂಟಪದಲ್ಲಿ ಪೂರ್ವ ಅಭಿಮುಖವಾಗಿ ಕೂಡಿಸಿ ಅವಳಿಗೆ ಆರತಿಯನ್ನು ಎತ್ತುತ್ತಾರೆ. ಈ ಕಾರ್ಯಕ್ರಮಕ್ಕೆ ಈ ಭಾಗದಲ್ಲಿ ಹೂ ಮೂಡಿಸುವುದು ಎಂದು ಕರೆಯುತ್ತಾರೆ. ಏಳು ದಿನಗಳ ಪ್ರತಿ ದಿನ ಸಂಜೆ ಈ ರೀತಿಯಾದ ಕಾರ್ಯಕ್ರಮವನ್ನು ಮಾಡುತ್ತಾ ಅವಳಿಗೆ ಹೊಸ ಹೊಸ ಸೀರೆಯನ್ನು ಉಡಿಸಿ ಮನೆಯಿಂದ ಹೊರಗಡೆ ಕರೆದುಕೊಂಡು ಬಂದು ಚಪ್ಪರದ ಮಂಟಪದಲ್ಲಿ ಕೂಡಿಸಿ ವಿವಿಧ ರೀತಿಯ ಹಾಡುಗಳನ್ನು ಸಂಭ್ರಮದ ರೂಪದಲ್ಲಿ ಹಾಡುತ್ತಾರೆ. ಊರಿನ ಇಲ್ಲವೇ ಓಣಿಯ ಎಲ್ಲಾ ಮುತ್ತೈದರು ಬಂದು ಸೇರುವುದು ವಿಶೇಷವಾಗಿರುತ್ತದೆ.

*'ಮೈನೆರೆತೆ ಮೈನೆರೆತೆ ಎನ್ನುಂಡೆ ಮೈ ನೆರೆತೆ*

*ಹಾಲು ಬಾನ ಉಂಡೆ ಮೈ ನೆರೆತೆ ಸೋ*

*ಹಾಲು ಬಾನ ಉಂಡಿದ ಮೇಲೆ ಮೈ ನೆರೆತೆ ಸೋ*

*ಬಾಣ ಸಂಸ್ಕಾರ ಪಡೆಯೋ ಸೋ*

ಈ ರೀತಿಯ ಹಾಡುಗಳನ್ನು ಹಾಡುತ್ತಾ ಮನೆಗೆ ಬಂದ ಮುತ್ತೈದೆಯರು ಸೋದರ ಅತ್ತೆ ಕೈಯಲ್ಲಿರುವ ಕಳಸವನ್ನು ಬೆಳಗುತ್ತಾ ಅವಳ ಮುಖದ ಮೇಲೆ ಅರಿಶಿನ ಕುಂಕುಮವನ್ನು ಹಚ್ಚುತ್ತಾ, ಅಕ್ಕಿ ಕಾಳನ್ನು ಹಾಕಿ ಹಾಡುವರು. ಪ್ರತಿದಿನ ಹೆಣ್ಣು ಮಕ್ಕಳು ಬಂದು ಈ ಮೈನೆರೆದ ಹೆಣ್ಣು ಮಗಳಿಗೆ ಹೂವು

ಹಣ್ಣು ಕೊಟ್ಟು ಕಳಸವನ್ನು ಬೆಳಗುತ್ತಾರೆ. ಹಾಗೆ ಬೆಳಗಿದ ನಂತರ ಪ್ರತಿ ದಿನ ಋತುಮತಿಯಾದ ಹೆಣ್ಣುಮಗಳಿಗೆ ಮತ್ತೆ ಮನೆಯ ಒಳಗಡೆ ಕರೆದುಕೊಂಡು ಹೋಗಿ ಕೂಡಿಸುತ್ತಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಕರ್ನಾಟಕ ಮತ್ತು ಆಂಧ್ರ ಗಡಿ ಭಾಗದ ಜೀವನಾವರ್ತನ ಆಚರಣೆಗಳು ಪ್ರಾದೇಶಿಕವಾಗಿ ಅಲ್ಪ ಪ್ರಮಾಣದ ವ್ಯತ್ಯಾಸವಿದ್ದರೂ ಕೂಡ ಹೆಚ್ಚಿನ ರೀತಿಯ ಭಿನ್ನತೆಯನ್ನು ಕಾಣಲಾಗುದು ಏಕೆಂದರೆ ಈ ಭಾಗದ ಆಚರಣೆಗಳು ಒಂದಕ್ಕೊಂದು ಸಮ್ಮಿಳಿತಗೊಂಡಿವೆ. ಹಾಗಾಗಿ ಮಾನವನ ಹುಟ್ಟು ಮತ್ತು ಸಾಯುವ ನಡುವೆ ನಡೆಯುವ ಆಚರಣೆಗಳು ಈ ಭಾಗದ ಜನಪದರ ಪ್ರಮುಖ ನಂಬಿಕೆಗಳಾಗಿ ಹಿಂದಿನಿಂದಲೂ ಆಚರಣೆಯಲ್ಲಿವೆ.

**ಪರಾಮರ್ಶನ ಗ್ರಂಥಗಳು**


- ಗದ್ದಗಿಮಠ ಬಿ.ಎಸ್. (2017). *ಕರ್ನಾಟಕ ಜಾನಪದ ದರ್ಶನ.* ಸರ್ಪನ್ ಪ್ರಕಾಶನ.
- ಹಲಸಂಗಿ ಗೆಳೆಯರು *(1931). ಗರತಿಯ ಹಾಡು.* ಸಮಾಜ ಪುಸ್ತಕಾಲಯ ಧಾರವಾಡ.
- ಹನಮಂತಪ್ಪ ತಾರಿಹಳ್ಳಿ. (2010). *ಕರ್ನಾಟಕ ಬುಡಕಟ್ಟು ಸಮುದಾಯಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಮೇಶ ಸ.ಚಿ. (ವರ್ಷ). *ಕರ್ನಾಟಕದ ಜನಪದ ಆಚರಣೆಗಳು*. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಮಕೃಷ್ಣಯ್ಯ, ಎನ್. (2018). *ಹೈದ್ರಾಬಾದ್ ಕರ್ನಾಟಕದ ಚರಿತ್ರೆ.*
- ಶಂಕರಾನಂದ. (2011). *ಕನ್ನಡ ತೆಲಗು ಜನಪದ ಸಾಹಿತ್ಯ*. ಸಾತ್ವಿಕ ಪ್ರಕಾಶನ.
- ತಾರಿಹಳ್ಳಿ ಹನುಮಂತಪ್ಪ. (2017). *ಕರ್ನಾಟಕದ ಉಗ್ರ ಆಚರಣೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ತಿಪ್ಪೇಸ್ವಾಮಿ ಡಿ.ಎಸ್. (ವರ್ಷ). *ಬಳ್ಳಾರಿ ಜಿಲ್ಲೆಯ ಜನಪದ ಗೀತ ಸಂಪ್ರದಾಯಗಳು.* ಕರ್ನಾಟಕ ವಿಶ್ವವಿದ್ಯಾಲಯ.